## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 318 ಕೆಎಸ್ಎಸ್ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:11.01.2017

## ಅಧಿಸೂಚನೆ

ವಿಷಯ :- ದಿನಾಂಕ:31.12.2016 ರಲ್ಲಿದ್ದಂತೆ ಸಂವಿಧಾನ 371- ಜೆ ಅನುಚ್ಛೇದದ ಮೇರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೈದರಾಬಾದ್ - ಕರ್ನಾಟಕ ಪ್ರದೇಶದ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದದ ಅಧಿಕಾರಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ :- 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 59 ಇತರೆ 2013, ದಿನಾಂಕ: 17.02.2014
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 139 ಕೆಎಸ್ಎಸ್ 2014, ದಿನಾಂಕ:6.5.2014 ಮತ್ತು 27.05.2014.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 139 ಕೆಎಸ್ಎಸ್ 2014, ದಿನಾಂಕ: 06.11.2014
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 139 ಕೆಎಸ್ಎಸ್ 2014, ದಿನಾಂಕ: 01.12.2014
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 140 ಕೆಎಸ್ಎಸ್ 2014, ದಿನಾಂಕ: 03.09.2015

*******

ಉಲ್ಲೇಖಿತ ಅಧಿಸೂಚನೆ ಸಂಖ್ಯೆ (1) ರಲ್ಲಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರ ಅಡಿಯಲ್ಲಿ ಸದರಿ ಪ್ರದೇಶದ ಸ್ಥಳೀಯ ವೃಂದದ ಹಾಗೂ ರಾಜ್ಯ ಮಟ್ಟದ ಸ್ಥಳೀಯ ವೃಂದದಲ್ಲಿ ಹುದ್ದೆಗಳನ್ನು ಗುರುತಿಸಿ ಅಧಿಸೂಚನೆ ಸಂಖ್ಯೆ : ಗ್ರಾಅಪ 59 ಇತರೆ 2013 ದಿನಾಂಕ : 17.2.2014 ರಲ್ಲಿ ಆದೇಶಿಸಲಾಗಿತ್ತು. ನಂತರ ಸದರಿ ವೃಂದಕ್ಕೆ ಸೇರಲು ಅಭಿಮತವನ್ನು ನೀಡುವಂತೆ ಉಲ್ಲೇಖ (2)ರ ದಿನಾಂಕ 6.5.2014 ಮತ್ತು 27.5.2014 ರ ಪತ್ರ ಸಂಖ್ಯೆ: ಗ್ರಾಅಪ 139 ಕೆಎಸ್ಎಸ್ 2014 ರಲ್ಲಿ ಕೋರಲಾಗಿತ್ತು.

ಇದಕ್ಕೆ ಸಂಬಂಧಿಸಿದಂತೆ ಉಲ್ಲೇಖ (3)ರಲ್ಲಿ ಸ್ಥಳೀಯ ವೃಂದ / ರಾಜ್ಯ ಮಟ್ಟದ ಸ್ಥಳೀಯ ವೃಂದಕ್ಕೆ ಸೇರಲು ಇಚ್ಛಿಸಿ ಬಂದಿರುವ ಅಭಿಮತ ಪತ್ರಗಳನ್ನು ಪರಿಶೀಲಿಸಿ ಸದರಿ ನಿಯಮಗಳ ನಿಯಮ 6ರ ಉಪನಿಯಮ 2 ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದಕ್ಕೆ ಹಂಚಿಕೆ ಮಾಡಿದ ಅಧಿಕಾರಿಗಳ ಜೇಷ್ಠತೆ / ಮೀಸಲಾತಿವಾರು ತಾತ್ಕಾಲಿಕ ಪಟ್ಟಿಯನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರ ನಿಯಮ 10ರನ್ವಯ ಅಧಿಸೂಚನೆ ಸಂಖ್ಯೆ; ಗ್ರಾಅಪ 139 ಕೆಎಸ್ಎಸ್ 2014 ದಿನಾಂಕ 06.11.2014 ರಲ್ಲಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಬಾಧಿತರಾದವರಿಂದ ಸಲಹೆ / ಆಕ್ಷೇಪಣೆ ಏನಾದರೂ ಇದ್ದಲ್ಲಿ 15 ದಿನಗಳೊಳಗಾಗಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು.

ಅದರಂತೆ ನಿಗದಿತ ಅವಧಿಯೊಳಗೆ ಸರ್ಕಾರದಲ್ಲಿ ಯಾವುದೇ ಸಲಹೆ / ಆಕ್ಷೇಪಣೆಗಳು ಸ್ವೀಕೃತಗೊಂಡಿರುವುದಿಲ್ಲ. ಆದ್ದರಿಂದ ಉಲ್ಲೇಖ (4)ರಲ್ಲಿ ದಿನಾಂಕ 01.12.2014 ರಲ್ಲಿದ್ದಂತೆ ಹೈದರಾಬಾದ್ – ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಾಪ್ತಿಯ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಮುಂದುವರೆದು, ಉಲ್ಲೇಖ (5)ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಹೈದರಾಬಾದ್ – ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಮೀಸಲಿರುವ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಲಾಗಿದೆ.

ಹೈದರಾಬಾದ್ – ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಮೀಸಲಿರುವ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದದಲ್ಲಿ ದಿನಾಂಕ:31.12.2016 ರಲ್ಲಿದ್ದಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ಇರುವಂತೆ ಪ್ರಕಟಿಸಲಾಗಿದೆ. ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೆಬ್‌ಸೈಟ್ ನಲ್ಲಿ ಎಲ್ಲರ ಗಮನಕ್ಕಾಗಿ ಪ್ರಕಟಿಸಲಾಗಿದೆ. ಸದರಿ ಜೇಷ್ಠತಾ ಪಟ್ಟಿ ಬಗ್ಗೆ ಸಲಹೆ / ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಲಿಖಿತ ಮೂಲಕ ಈ ಅಧಿಸೂಚನೆಯನ್ನು ಪ್ರಕಟಿಸಲಾದ ದಿನಾಂಕದಿಂದ 15 ದಿನಗಳೊಳಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 3ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. ಸದರಿ ಕಾಲಮಿತಿಯೊಳಗೆ ಸ್ವೀಕರಿಸದ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಈ ಜೇಷ್ಠತಾ ಪಟ್ಟಿಯು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಸ್ತುತ ಬಾಕಿ ಇರುವ ಅರ್ಜಿ ಸಂಖ್ಯೆ:680–1–5/2011 ಮತ್ತು ಮಾನ್ಯ ಉಚ್ಛ ನ್ಯಾಯಾಲಯದ ಧಾರವಾಡ ಪೀಠದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ : 103129–103515/2014 ಹಾಗೂ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ : 2123–2168/2014ರ ಹಾಗೂ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಇತರೆ ದಾವೆಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.

ಶ್ರೀ ಸೋಮಶೇಖರ್, ಯು.ಹೆಚ್. ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ತಾಲ್ಲೂಕು ಪಂಚಾಯಿತಿ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ ಇವರು ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಸೇರಿಲ್ಲದಿದ್ದರೂ ಸಹ ಹೈದರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಮೀಸಲಾತಿಯನ್ವಯ ಮುಂಬಡ್ತಿ ಪಡೆದಿರುವ ಬಗ್ಗೆ ಶ್ರೀ ಉಮೇಶ್ ಮತ್ತು ಇತರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ದೂರು ಸಲ್ಲಿಸಿದ್ದು, ಸದರಿಯವರು ಹೈದರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಮೀಸಲಾತಿ ವ್ಯಾಪ್ತಿಗೆ ಒಳಪಟ್ಟಿರುತ್ತಾರೆಯೇ ಇಲ್ಲವೇ ಎಂಬ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯತ್ ಶಾಖೆಯಿಂದ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ದಾವಣಗೆರೆ ಇವರಿಂದ ಸ್ಪಷ್ಟೀಕರಣ / ವರದಿಯನ್ನು ಕೋರಿದ್ದು, ಸದರಿ ವರದಿಯನ್ವಯ ಶ್ರೀ ಸೋಮಶೇಖರ್, ಯು.ಹೆಚ್. (ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ 24, ಜೇಷ್ಠತೆ ಸಂಖ್ಯೆ: 17) ಇವರ ಜೇಷ್ಠತಾ ಸಂಖ್ಯೆಯಲ್ಲಿ ವ್ಯತ್ಯಾಸ ಉಂಟಾಗುವ ಸಾಧ್ಯತೆಯಿರುತ್ತದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
11/01/2017
(ಎಸ್.ರಂಗನಗೌಡ)
11/01/2017
ಸರ್ಕಾರದ ಅಧೀನ ಕಾರ್ಯದರ್ಶಿ
(ಸೇವೆಗಳು ಬಿ. ಮತ್ತು ಸಿ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:–

ಸಂಕಲನಾಧಿಕಾರಿಗಳು, ಕರ್ನಾಟಕ ವಿಶೇಷ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ, ಆದೇಶದ 100 ಪ್ರತಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕಳುಹಿಸಲು ಕೋರಿದೆ.

ಪ್ರತಿ ಇವರಿಗೆ:

1. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಹೈದ್ರಾಬಾದ್ ಕರ್ನಾಟಕ ವಿಶೇಷ ಕೋಶ, ಸಿ.ಆ.ಸು. ಇಲಾಖೆ.

2. ಹೈದರಾಬಾದ್ – ಕರ್ನಾಟಕ ಪ್ರದೇಶ ವ್ಯಾಪ್ತಿಯ 6 ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ.
3. ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) / ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ), ಇವರ ಆಪ್ತ ಶಾಖೆ.
6. ಸಂಬಂಧಿಸಿದ ಅಧಿಕಾರಿಗಳು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ದಿನಾಂಕ:31.12.2016 ರಲ್ಲಿದಂತೆ ಸಂವಿಧಾನ 371–ಜೆ ಅನುಚ್ಛೇದದ ಮೇರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಹೈದ್ರಾಬಾದ್ – ಕರ್ನಾಟಕ ಪ್ರದೇಶದ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದದ ಅಧಿಕಾರಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿ

| ಕ್ರ. ಸಂ. | ಪಂಚಾಯತ್ ಅಭಿವೃದ್ಧಿ ವೃಂದದಲ್ಲಿನ ಜೇಷ್ಠತಾ ಪಟ್ಟಿ | ಸಹಾಯಕ ನಿರ್ದೇಶಕರು (ಗ್ರಾ.ಉ.) ವೃಂದದಲ್ಲಿನ ಜೇಷ್ಠತಾ ಪಟ್ಟಿ | ಅಧಿಕಾರಿಯ ಹೆಸರು ಶ್ರೀಮತಿ/ಶ್ರೀ | ಹುಟ್ಟಿದ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಸಹಾಯಕ ನಿರ್ದೇಶಕರ (ಗ್ರಾ.ಉ) ವೃಂದಕ್ಕೆ ವಾಸ್ತವವಾಗಿ ಮುಂಬಡ್ತಿ ನೀಡಿದ ದಿನಾಂಕ | ಪ್ರವರ್ಗ/ಹೈ.ಕ | ಷರಾ |
|---|---|---|---|---|---|---|---|---|
| 1 | | 2 | 3 | 4 | 5 | 6 | 7 | 8 |
| 1 | | | ವಿಜಯ ಕುಮಾರ್ | 03.11.1956 | 03.05.1997 | 30.12.2011 | ಹೈ.ಕ. | ನಿವೃತ್ತಿ |
| 2 | | 1 | ಕೆ.ವಿ.ನಿರ್ಮಲ | 01.07.1971 | 13.12.2004 | 30.12.2011 | ಪ.ಜಾತಿ.ಹೈ.ಕ | |
| 3 | | 2 | ಶಿವಪ್ಪ ಸುಬೇದಾರ್ | 04.06.1964 | 18.8.1994 | 13.08.2013 | ಪ.ಪಂ. ಹೈ.ಕ. | |
| 4 | | | ವಿಷ್ಣು ತೀರ್ಥಚಾರ್ | 26.03.1955 | 17.03.1994 | 13.08.2013 | ಹೈ.ಕ. | ನಿವೃತ್ತಿ |
| 5 | | | ಧನರಾಜ್ ಬೋರಾಳೆ | 01.06.1973 | 05.02.2004 | 28.02.2014 | ಪ.ಜಾತಿ.ಹೈ.ಕ | ಮುಂಬಡ್ತಿ |
| 6 | | | ಕೊರಮ ತಿಮ್ಮಪ್ಪ | 04.05.1969 | 27.06.2003 | 28.02.2014 | ಪ.ಜಾತಿ.ಹೈ.ಕ | ಮುಂಬಡ್ತಿ |
| 7 | | | ಜಗನ್ನಾಥಮೂರ್ತಿ | 21.07.1965 | 22.12.2004 | 28.02.2014 | ಪ.ಜಾತಿ.ಹೈ.ಕ | ಮುಂಬಡ್ತಿ |
| 8 | | | ಸಿದ್ರಾಮಪ್ಪ ಬಾಳಪ್ಪಗೋಳ | 02.10.1956 | 05.04.1987 | 18.11.2014 | ಹೈ.ಕ. | ನಿಧನ |

ಅಧಿಸೂಚನೆ ಸಂಖ್ಯೆ: ಗ್ರಾಅಪ 140 ಕೆಎಸ್ಎಸ್ 2014, ದಿನಾಂಕ : 03.09.2015 ರಂದು ಮುಂಬಡ್ತಿ ಹೊಂದಿದ ಅಧಿಕಾರಿಗಳು

| ಕ್ರ. ಸಂ. | ಸಂವಿಧಾನ 371–ಜೆ ಅನುಚ್ಛೇದದ ಮೇರೆಗೆ ಹೈದ್ರಾಬಾದ್ – ಕರ್ನಾಟಕ ಪ್ರದೇಶ ವ್ಯಾಪ್ತಿಯ ಪಂಚಾಯತ್ ಅಭಿವೃದ್ಧಿ ವೃಂದದಲ್ಲಿನ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ | | ಅಧಿಕಾರಿಯ ಹೆಸರು ಶ್ರೀಮತಿ/ಶ್ರೀ | ಹುಟ್ಟಿದ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಸಹಾಯಕ ನಿರ್ದೇಶಕರ (ಗ್ರಾ.ಉ) ವೃಂದಕ್ಕೆ ವಾಸ್ತವವಾಗಿ ಮುಂಬಡ್ತಿ ನೀಡಿದ ದಿನಾಂಕ | ಪ್ರವರ್ಗ/ಹೈ.ಕ | ಷರಾ |
|---|---|---|---|---|---|---|---|---|
| 9 | 5 | | ಎ.ಹೆಚ್.ಎಂ.ತಿಪ್ಪೇಸ್ವಾಮಿ | 15.02.1956 | 19.03.1994 | 03.09.2015 | ಹೈ.ಕ | ನಿವೃತ್ತಿ |
| 10 | 8 | 3 | ಸುಹಾಸ್ ಪಿ.ಜಾಧವ್ | 01.06.1958 | 14.08.1986 | 03.09.2015 | ಹೈ.ಕ | |
| 11 | 9 | 4 | ಹೆಚ್.ಬಸವರಾಜು | 01.06.1959 | 01.03.1997 | 03.09.2015 | ಹೈ.ಕ | |
| 12 | 12 | 5 | ವೈಜಣ್ಣ | 01.06.1965 | 01.09.1997 | 03.09.2015 | ಹೈ.ಕ(ಪ.ಪಂ) | |

| | | | | | | | | |
|---|---|---|---|---|---|---|---|---|
| 13 | 15 | 6 | ನರಸಿಂಗರಾವ್ | 24.04.1958 | 17.08.1994 | 03.09.2015 | ಹೈ.ಕ | |
| 14 | 17 | 7 | ವಿಶ್ವನಾಥ್ | 01.06.1975 | 20.11.2000 | 03.09.2015 | ಹೈ.ಕ | |
| 15 | 20 | 8 | ಅಬ್ದುಲ್ ನಬಿ | 25.09.1979 | 16.08.2010 | 03.09.2015 | ಹೈ.ಕ | |
| 16 | 21 | 9 | ಚಂದ್ರಶೇಖರ್ | 01.06.1981 | 28.01.2004 | 03.09.2015 | ಹೈ.ಕ | |
| 17 | 22 | 10 | ಬೀರೇಂದರ್‌ಸಿಂಗ್ ಕಿಶನ್‌ಸಿಂಗ್ | 01.06.1977 | 05.04.2010 | 03.09.2015 | ಹೈ.ಕ | |
| 18 | 24 | 11 | ಮಹದೇವ ಎಸ್.ಬಾಬಳಗಿ | 11.08.1981 | 16.08.2010 | 03.09.2015 | ಹೈ.ಕ | |
| 19 | 25 | 12 | ಚಂದ್ರಶೇಖರ್ ಪವಾರ್ | 01.06.1974 | 05.04.2010 | 03.09.2015 | ಹೈ.ಕ(ಪ.ಜಾ) | |
| 20 | 27 | 13 | ಬಸವರಾಜ್ ವೀರಣ್ಣ | 09.06.1981 | 16.08.2010 | 03.09.2015 | ಹೈ.ಕ | |
| 21 | 30 | 14 | ಪವನ್‌ಕುಮಾರ್ ಎಸ್.ದಂಡಪ್ಪನವರ್ | 20.03.1982 | 05.04.2010 | 03.09.2015 | ಹೈ.ಕ | |
| 22 | 31 | 15 | ಶ್ರೀಕುಮಾರ್.ಕೆ.ಆರ್ | 23.04.1986 | 05.04.2010 | 03.09.2015 | ಹೈ.ಕ | |
| 23 | 32 | 16 | ಪಂಪಾಪತಿ ಸಿದ್ದಲಿಂಗಯ್ಯ | 13.03.1973 | 27.04.2010 | 03.09.2015 | ಹೈ.ಕ | |
| 24 | 33 | 17 | ಸೋಮಶೇಖರ್ ಯು.ಹೆಚ್ | 04.05.1981 | 05.04.2010 | 03.09.2015 | ಹೈ.ಕ | |
| 26 | 36 | 18 | ರಾಮರೆಡ್ಡಿ | 02.06.1984 | 05.04.2010 | 03.09.2015 | ಹೈ.ಕ | |
| 27 | 37 | 19 | ಮಡಗಿನ ಬಸಪ್ಪ | 01.06.1976 | 05.04.2010 | 03.09.2015 | ಹೈ.ಕ(ಪ.ಪಂ) | |
| 28 | 38 | 20 | ಅಮರಪ್ಪ | 03.06.1978 | 05.04.2010 | 03.09.2015 | ಹೈ.ಕ | |
| 29 | 39 | 21 | ಮಾಣಿಕ್‌ರಾವ್ ಸುಭಾಷ್‌ರಾವ್ | 05.05.1979 | 05.04.2010 | 03.09.2015 | ಹೈ.ಕ | |
| 30 | 40 | 22 | ಮಾನಪ್ಪ ತಂದೆ ಮುರುಗಣಪ್ಪ | 22.07.1979 | 16.08.2010 | 03.09.2015 | ಹೈ.ಕ | |
| 31 | 13 | 23 | ಕೆ.ಆರ್.ಪ್ರಕಾಶ್ | 04.01.1966 | 22.02.1999 | 30.12.2015 | ಹೈ.ಕ | |

ಒಖ್ಯೆ: ಗ್ರಾಅಪ 318 ಕೆಎಸ್‌ಎಸ್ 2016

11/01/2017

(ಎಸ್.ರಂಗನಗೌಡ)

11/01/2017 ಸರ್ಕಾರದ ಅಧೀನ ಕಾರ್ಯದರ್ಶಿ,

(ಸೇವೆಗಳು ಬಿ ಮತ್ತು ಸಿ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.